**ದಿನಾಂಕ: 04-11-2009 ರಂದು ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಹಾಗೂ ಮಾನ್ಯ ಕಾರ್ಮಿಕ ಸಚಿವರು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೊದಲನೆಯ ಸಭೆಯ ನಡವಳಿಗಳು.**

**: ಅಧ್ಯಕ್ಷತೆ :**

ಶ್ರೀ ಬಿ. ಎನ್. ಬಚ್ಚೇಗೌಡ,
ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ
ಸನ್ಮಾನ್ಯ ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

ಹಾಜರಿದ್ದ ಸದಸ್ಯರು:- ಅನುಬಂಧದಲ್ಲಿ ನಮೂದಿಸಿರುವಂತೆ

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಹಾಗೂ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಯವರು ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಮತ್ತು ಇತರೆ ಗೌರವಾನ್ವಿತ ಸದ್ಯಸರನ್ನು ಸಭೆಗೆ ಸ್ವಾಗತಿಸಿದರು.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ಜಾರಿಗೆ ಬಂದಿರುವ ಬಗ್ಗೆ, ಮತ್ತು ಕಾಯ್ದೆಯ ಅಡಿಯಲ್ಲಿ ಕರ್ನಾಟಕ ನಿಯಮಗಳನ್ನು ಹಾಗೂ ಅಸಂಘಟಿಕ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಾಜ್ಯದಲ್ಲಿ ರಚಿಸಿರುವ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ವಿವರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷರು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಮಹೋನ್ನತ ಉದ್ದೇಶದಿಂದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ಅನ್ನು ಭಾರತ ಸರ್ಕಾರ ರಚಿಸಿರುತ್ತದೆ. ಕರ್ನಾಟಕದಲ್ಲಿ ಸುಮಾರು 2.5 ಕೋಟಿ ಅಸಂಘಟಿತ ಕಾರ್ಮಿಕರಿದ್ದು, ಇವರೆಲ್ಲ ಬಹಳ ಹೀನ ಸ್ಥಿತಿಯಲ್ಲಿದ್ದಾರೆ. ಅವರಿಗೆ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಪ್ರಥಮ ಹೆಜ್ಜೆಯನ್ನು ಇಟ್ಟಿರುವ ಹೆಗ್ಗಳಿಕೆಗೆ ಕರ್ನಾಟಕ ರಾಜ್ಯ ಪಾತ್ರವಾಗಲಿದೆ ಎಂದರು. ಕರ್ನಾಟಕ ಸರ್ಕಾರವು ಅಲ್ಪಕಾಲಾವಧಿಯಲ್ಲಿಯೇ ನಿಯಮಗಳನ್ನು ರಚಿಸಿ, ಮಂಡಳಿಯನ್ನು ಸ್ಥಾಪಿಸಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷರ ಅನುಮತಿಯ ಮೇರೆಗೆ ಸಭೆ ಪ್ರಾರಂಭಿಸಲಾಯಿತು.

**ವಿಷಯ 1:- ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿಯನ್ನು ಸ್ಥಾಪಿಸುವ ಬಗ್ಗೆ.**

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಬರುವಂತಹ ಅನುದಾನವನ್ನು ಮತ್ತು ನೋಂದಾಯಿತ ಅಸಂಘಟಿತ ಕಾರ್ಮಿಕರಿಂದ ಬರುವಂತಹ ನೋಂದಣಿ ಶುಲ್ಕ ಮತ್ತು ವಂತಿಕೆ ಹಣವನ್ನು ಮತ್ತು ಮಾಲೀಕರಿಂದ ಸಂಗ್ರಹಿಸುವಂತಹ ವಂತಿಕೆ (contribution) ಯನ್ನು ಒಟ್ಟುಗೂಡಿಸಿ, ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆಗೆದು **'ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ'** ಎಂಬ ಹೆಸರಿನಲ್ಲಿ ನಿಧಿ ಸ್ಥಾಪಿಸುವುದಾಗಿ ಮಾನ್ಯ ಸದಸ್ಯ ಕಾರ್ಯದರ್ಶಿಗಳು ವಿವರಿಸಿದರು.

ಮುಂದುವರೆದು ರಾಜ್ಯ ಸರ್ಕಾರದಿಂದ ಮಂಡಳಿಗೆ ರೂ.5 ಕೋಟಿಯು 2009-10 ನೇ ಆರ್ಥಿಕ ವರ್ಷದಲ್ಲಿ ಮಂಜೂರಾಗಿದ್ದು, ಈ ಪೈಕಿ ರೂ.2.5 ಕೋಟಿ ಬಿಡುಗಡೆಯಾಗಿರುತ್ತದೆ. ಈ ಅನುದಾನದ ಮೊತ್ತವನ್ನು ಮಂಡಳಿಯ ಈಗಿನ ಆಡಳಿತಾತ್ಮಕ ವೆಚ್ಚಕ್ಕಾಗಿ ಹಾಗೂ ಮುಂಬರುವ ದಿನಗಳಲ್ಲಿನ ಯೋಜನೆಗಳ ಖರ್ಚುವೆಚ್ಚಗಳಿಗಾಗಿ ಬಳಸಿಕೊಳ್ಳಲಾಗುವುದು ಎಂದು ಹೇಳಿದರು.

ಇದಲ್ಲದೇ ಸದ್ಯಕ್ಕೆ ಮಂಡಳಿಯ ಆಡಳಿತಾತ್ಮಕ ವೆಚ್ಚವನ್ನು ಭರಿಸಲು ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾದ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಇವರಿಗೆ ಅಧಿಕಾರ ನೀಡಬೇಕಾಗುತ್ತದೆ ಎಂದು ತಿಳಿಸಿದರು. ಅಂದರೆ ಮಂಡಳಿಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು ಮಂಡಳಿಯ ಕಛೇರಿಯ ಬಾಡಿಗೆ, ಬಾಹ್ಯಮೂಲದಿಂದ ವಾಹನಗಳ ಎರವಲು, ಪೀಠೋಪಕರಣ, ಕಂಪ್ಯೂಟರ್ಸ್ ಮತ್ತು ಪೆರಿಫೆರಲ್ಸ್, ದೂರವಾಣಿ, ಫಾಕ್ಸ್, ಜೆರಾಕ್ಸ್, ವಿದ್ಯುಚ್ಛಕ್ತಿ ಬಿಲ್, ನೀರಿನ ಬಿಲ್, ಸ್ಟ್ಯಾಂಪ್ಸ್ ಮತ್ತು ಕೋರಿಯರ್, ಸ್ಟೇಷನರಿ, ಫ್ರ್ಯಾಂಕಿಂಗ್ ಮಿಷಿನ್, ಡೂಪ್ಲಿಕೇಟರ್, ಪುಸ್ತಕಗಳು ಮುಂತಾದ ದೈನಂದಿನ ಕಛೇರಿ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳ ಖರೀದಿಗಾಗಿ ಮಾನ್ಯ ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಬೇಕಾಗುತ್ತದೆ

***ನಿರ್ಣಯ:-*** ಮೇಲೆ ತಿಳಿಸಿರುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಸ್ಥಾಪಿಸಲು ಹಾಗೂ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಮಂಡಳಿಯ ಆಡಳಿತಾತ್ಮಕ ವೆಚ್ಚವನ್ನು ಭರಿಸಲು ಸದಸ್ಯರು ಅಧಿಕಾರ ನೀಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ 2:- ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಕಛೇರಿ ಮತ್ತು ಆಡಳಿತಾತ್ಮಕ ವ್ಯವಸ್ಥೆ ಸೃಷ್ಟಿಸುವ ಬಗ್ಗೆ.**

ಈ ಕೆಳಗಿನ ಕೋಷ್ಟಕ-1 ರಲ್ಲಿ ಸೂಚಿಸಿರುವಂತೆ ಮಂಡಳಿಯ ದೈನಂದಿನ ಆಡಳಿತ ನಡೆಸುವುದಕ್ಕೆ ಹುದ್ದೆಗಳನ್ನು ಸೃಷ್ಠಿಸುವ ಬಗ್ಗೆ ಚರ್ಚೆ ನಡೆಯಿತು.

**ಕೋಷ್ಟಕ-1**

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಮತ್ತು ಅನುಭವ | ವೇತನ ಶ್ರೇಣಿ | ತುಂಬುವ ರೀತಿ |
|---|---|---|---|---|---|
| 1 | ಜಂಟಿ ಕಾರ್ಮಿಕ ಆಯುಕ್ತರು | 1 | - | ಸರ್ಕಾರದ ವೇತನ ಶ್ರೇಣಿ ರೂ.20,025-28,275/- | ಹುದ್ದೆಯನ್ನು ಸೃಜಿಸುವುದು ಮತ್ತು ಕಾರ್ಮಿಕ ಇಲಾಖೆಯಿಂದ ಎರವಲು ಆಧಾರದ ಮೇಲೆ ಪಡೆಯಲಾಗುವುದು. |
| 2 | ಸಹಾಯಕ ಕಾರ್ಮಿಕ ಆಯುಕ್ತರು | 2 | - | ಸರ್ಕಾರದ ವೇತನ ಶ್ರೇಣಿ ರೂ.14,050-25,050/- | ಹುದ್ದೆಯನ್ನು ಸೃಜಿಸುವುದು ಮತ್ತು ಕಾರ್ಮಿಕ ಇಲಾಖೆಯಿಂದ ಎರವಲು ಆಧಾರದ ಮೇಲೆ ಪಡೆಯಲಾಗುವುದು. |
| 3 | ಅಕೌಂಟ್ಸ್ ಆಫೀಸರ್ (ಕ್ಲಾಸ್ ಒನ್) | 1 | - | ಸರ್ಕಾರದ ವೇತನ ಶ್ರೇಣಿ ರೂ.14,050-25,050/- | ಹುದ್ದೆಯನ್ನು ಸೃಜಿಸುವುದು ಮತ್ತು ಸ್ಟೇಟ್ ಅಕೌಂಟ್ಸ್ ಇಲಾಖೆಯಿಂದ ಎರವಲು ಆಧಾರದ ಮೇಲೆ ಪಡೆಯಲಾಗುವುದು. (ಸರ್ಕಾರಿ ಇಲಾಖೆಯಿಂದ ದೊರೆಯದಿದ್ದ ಪಕ್ಷದಲ್ಲಿ consolidated pay ಮೇಲೆ ಬಾಹ್ಯಮೂಲದಿಂದ) |

| | | | | | |
|---|---|---|---|---|---|
| 4 | ಕಾರ್ಮಿಕ ಅಧಿಕಾರಿ | 1 | – | ಸರ್ಕಾರದ ವೇತನ ಶ್ರೇಣಿ ರೂ.10,800-20,025/- | ಹುದ್ದೆಯನ್ನು ಸೃಜಿಸುವುದು ಮತ್ತು ಕಾರ್ಮಿಕ ಇಲಾಖೆಯಿಂದ ಎರವಲು ಆಧಾರದ ಮೇಲೆ ಪಡೆಯಲಾಗುವುದು. |
| 5 | ಲೈಬ್ರೆರಿಯನ್ ಕಂ ಡಕ್ಯೂಮೆಂಟೇಷನ್ ಆಫೀಸರ್ (ಕ್ಲಾಸ್ ಟು) | 1 | – | ಸರ್ಕಾರದ ವೇತನ ಶ್ರೇಣಿ ರೂ.10,800-20,025/- | ಹುದ್ದೆಯನ್ನು ಸೃಜಿಸುವುದು ಮತ್ತು ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯಿಂದ ಎರವಲು ಆಧಾರದ ಮೇಲೆ ಪಡೆಯಲಾಗುವುದು. (ಸರ್ಕಾರಿ ಇಲಾಖೆಯಿಂದ ದೊರೆಯದಿದ್ದ ಪಕ್ಷದಲ್ಲಿ consolidated pay ಮೇಲೆ ಬಾಹ್ಯಮೂಲದಿಂದ) |
| 6 | ರಿಸರ್ಚ್ ಅಸಿಸ್ಟೆಂಟ್ | 4 | ಎಂ.ಎಸ್.ಡಬ್ಲ್ಯೂ ಮತ್ತು 1 ವರ್ಷದ ಅನುಭವ | ರೂ. 9,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 7 | ಕ್ಲರ್ಕ (ಪ್ರಥಮ ದರ್ಜೆ ಸಹಾಯಕರ ಸಮಾನಾಂತರ ಹುದ್ದೆ) | 10 | ಪದವಿ ಮತ್ತು 1 ವರ್ಷದ ಅನುಭವ | ರೂ. 8,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 8 | ಡಾಟಾ ಎಂಟ್ರಿ ಆಪರೇಟರ್ಸ್ (ದ್ವಿತೀಯ ದರ್ಜೆ ಸಹಾಯಕರ ಸಮಾನಾಂತರ ಹುದ್ದೆ) | 4 | ಪಿ.ಯು.ಸಿ ಮತ್ತು ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್ ಮತ್ತು 1 ವರ್ಷದ ಅನುಭವ | ರೂ. 7,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 9 | ಶೀಘ್ರಲಿಪಿಗಾರರು | 2 | ಪದವಿ ಮತ್ತು ಕನ್ನಡದಲ್ಲಿ ಶೀಘ್ರಲಿಪಿ ಮತ್ತು 1 ವರ್ಷದ ಅನುಭವ | ರೂ. 8,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 10 | ಜವಾನರು | 4 | ಎಸ್.ಎಸ್.ಎಲ್.ಸಿ | ರೂ. 6,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 11 | ಡ್ರೈವರ್ಸ್ | 2 | ವಾಹನ ಚಾಲನೆಯಲ್ಲಿ 1 ವರ್ಷದ ಅನುಭವ | ರೂ. 7,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |
| 12 | ತಂತ್ರಜ್ಞ (ಜೆರಾಕ್ಸ್, ಫಾಕ್ಸ್, ಕಂಪ್ಯೂಟರ್ಸ್ ಮತ್ತು ಟೆಲಿಫೋನ್ಸ್ ಮುಂತಾದವುಗಳ ನಿರ್ವಹಣೆ) | 1 | ಪಿ.ಯು.ಸಿ./ಡಿಪ್ಲೋಮಾ ಮತ್ತು ತತ್ಸಂಬಂಧ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸ್ | ರೂ. 7,500+ ಪಿ.ಎಫ್ ಮತ್ತು ಇ.ಎಸ್.ಐ. | ಬಾಹ್ಯಮೂಲದಿಂದ |

ಜೊತೆಗೆ ಮಂಡಳಿಯ ಕಛೇರಿಯನ್ನು ಸ್ಥಾಪಿಸಲು ಈ ಕೆಳಗಿನ ಕೋಷ್ಠಕ–2 ರಲ್ಲಿ ಸೂಚಿಸಿರುವಂತೆ ಸ್ಥಳಾವಕಾಶದ ಅವಶ್ಯಕತೆ ಇರುತ್ತದೆ ಎನ್ನುವ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಯಿತು.

**ಕೋಷ್ಠಕ–2**

| ಕ್ರ.ಸಂ. | ಅಧಿಕಾರಿ/ಸಿಬ್ಬಂದಿಯ ವಿವರ | ಸ್ಥಳಾವಕಾಶದ ಅವಶ್ಯಕತೆ |
|---|---|---|
| 1 | ಜಂಟಿ ಕಾರ್ಮಿಕ ಆಯುಕ್ತರು | 400 ಚದರ ಅಡಿ |
| 2 | ಸಹಾಯಕ ಕಾರ್ಮಿಕ ಆಯುಕ್ತರು (ಇಬ್ಬರಿಗೆ) | 400 ಚದರ ಅಡಿ |
| 3 | ಅಕೌಂಟ್ಸ್ ಆಫೀಸರ್ | 200 ಚದರ ಅಡಿ |
| 4 | ಕಾರ್ಮಿಕ ಅಧಿಕಾರಿ | 200 ಚದರ ಅಡಿ |
| 5 | ಲೈಬ್ರೆರಿಯನ್ ಕಂ ಡಾಕ್ಯೂಮೆಂಟೇಷನ್ ಆಫೀಸರ್ | 200 ಚದರ ಅಡಿ |
| 6 | ರಿಸರ್ಚ್ ಅಸಿಸ್ಟೆಂಟ್ ಮುಂತಾದ ಸಿಬ್ಬಂದಿ | 800 ಚದರ ಅಡಿ |
| 7 | ಬೋರ್ಡ್ ರೂಂ, ಲೈಬ್ರರಿ, ಗೆಸ್ಟ್ ರೂಂ, ಮೀಟಿಂಗ್ ಹಾಲ್ ಮುಂತಾದವು | 1000 ಚದರ ಅಡಿ |
| | ಒಟ್ಟು | 3200 ಚದರ ಅಡಿ |

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಹಾಗೂ ಶ್ರೀ ಮಂಜುನಾಥ ಶಾಸ್ತ್ರಿ, ಅಪರ ಕಾರ್ಮಿಕ ಆಯುಕ್ತರು, ಕೋಷ್ಠಕ–2 ರಲ್ಲಿರುವಂತೆ ಮಂಡಳಿಯ ದೈನಂದಿನ ಕೆಲಸಕಾರ್ಯಗಳಿಗೆ ಸ್ಥಳಾವಕಾಶದ ಅವಶ್ಯಕತೆ ಇರುವುದಾಗಿ ವಿವರಿಸಿದರು. ಮುಂದುವರೆದು, ಬಸವ ಭವನ, ಹೈಗ್ರೌಂಡ್ಸ್ ರಸ್ತೆ, ಬೆಂಗಳೂರು ಮತ್ತು ಕೆ.ಎಸ್.ಆರ್.ಟಿ.ಸಿ. ರಿಜಿನಲ್ ಆಫೀಸ್, ಡಬಲ್ ರೋಡ್, ಬೆಂಗಳೂರು ಇಲ್ಲಿ ಈಗಾಗಲೇ ಸ್ಥಳಾವಕಾಶದ ಬಗ್ಗೆ ವಿಚಾರಿಸಲಾಗಿರುವ ಬಗ್ಗೆ ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಮತ್ತು ಇತರೆ ಸದಸ್ಯರು ಬಸವ ಭವನ Centrally Located ಆಗಿರುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ಮಂಜುನಾಥ ಶಾಸ್ತ್ರಿಯವರು ಬಸವ ಭವನದಲ್ಲಿ ಮಂಡಳಿಯ ಕಛೇರಿಯನ್ನು ಸ್ಥಾಪಿಸುವ ಸಾಧ್ಯ ಸಾಧ್ಯತೆಗಳ ಬಗ್ಗೆ ಸದ್ಯದಲ್ಲೇ ತಿಳಿದುಕೊಳ್ಳುವುದಾಗಿ

ಕೋಷ್ಟಕ-1 ರಲ್ಲಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಎರವಲು ಪಡೆಯುವ ಬಗ್ಗೆ ಮತ್ತು ಬಾಹ್ಯ ಮೂಲದಿಂದ ತುಂಬುವ ಬಗ್ಗೆ ಸಭೆ ಚರ್ಚೆ ನಡೆಸಿತು. ಶಾಸಕ ಸದಸ್ಯರಾದ ಶ್ರೀ ವಿಶ್ವನಾಥ್ ರವರು ಮಂಡಳಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಸಂಬಳ ಭರಿಸುವಲ್ಲಿ ಸರ್ಕಾರ ನೀಡಿರುವ ಸಂಪೂರ್ಣ ಅನುದಾನ ಖರ್ಚಾಗುವ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಈ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಯವರನ್ನು ಒಮ್ಮೆಲೇ ತುಂಬುವುದಿಲ್ಲ, ಅವರುಗಳನ್ನು ಕಾಲ ಕಾಲಕ್ಕೆ ಅವಶ್ಯಕತೆಗೆ ಅನುಸಾರವಾಗಿ ತುಂಬಲಾಗುವುದು ಎಂದರು. ಅದು ಅಲ್ಲದೇ, ವಿವಿಧ ಕ್ಷೇತ್ರಗಳ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವಂತಹ ಯೋಜನೆಗಳನ್ನು ಹಮ್ಮಿಕೊಳ್ಳಲು ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರಲು ಕೇವಲ ಒಂದು ಮಂಡಳಿ ಅಸ್ತಿತ್ವದಲ್ಲಿರುತ್ತದೆ. ಎಲ್ಲ ಕ್ಷೇತ್ರದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ನ್ಯಾಯ ಒದಗಿಸಲು ಕೋಷ್ಟಕ-1 ರಲ್ಲಿ ಸೂಚಿಸಿರುವ ಕನಿಷ್ಠ ಅಧಿಕಾರಿ ವೃಂದ ಮತ್ತು ಸಿಬ್ಬಂದಿಯ ಅವಶ್ಯಕತೆ ಇರುತ್ತದೆ ಎಂದರು. ಮುಂದುವರೆದು, ರಾಜ್ಯ ಸರ್ಕಾರ ಮಂಡಳಿಗೆ ಈ ವರ್ಷ ರೂ.5 ಕೋಟಿ ಮಂಜೂರು ಮಾಡಿರುವಂತೆ, ಪ್ರತಿ ವರ್ಷ ಅನುದಾನಕ್ಕಾಗಿ ಸರ್ಕಾರವನ್ನು ಕೋರಲಾಗುವುದು. ಅಲ್ಲದೇ ಕೇಂದ್ರ ಸರ್ಕಾರದಿಂದಲೂ ಅನುದಾನವನ್ನು ಕೋರಲಾಗುವುದು ಎಂದರು.

***ನಿರ್ಣಯ:-*** ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಆಡಳಿತಾತ್ಮಕ ವ್ಯವಸ್ಥೆ ಕಲ್ಪಿಸಲು ಮತ್ತು ಆಡಳಿತ ನಡೆಸುವುದಕ್ಕೆ ಕೋಷ್ಟಕ-1 ರಲ್ಲಿ ನಮೂದಿಸಿರುವ ಹುದ್ದೆಗಳನ್ನು ಸೃಷ್ಟಿಸಲು ಹಾಗೂ ಕೋಷ್ಟಕ-2 ರಲ್ಲಿ ವಿವರಿಸಿರುವಂತೆ ಕಛೇರಿ ಸ್ಥಾಪಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 3:- ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಅಡಿಯಲ್ಲಿ ಕರ್ನಾಟಕ ನಿಯಮಗಳನ್ನು ಹಾಗೂ ಯೋಜನೆಗಳನ್ನು ರಚಿಸಲು "ವಿಶೇಷ ಸಮಿತಿ"ಯನ್ನು ನೇಮಕ ಮಾಡುವ ಬಗ್ಗೆ.**

ಅಸಂಘಟಿತ ಕಾರ್ಮಿಕರಿಗೆ ಯೋಜನೆಗಳನ್ನು ರೂಪಿಸಲು, ನೋಂದಾಯಿತ ಕಾರ್ಮಿಕರಿಂದ ನೋಂದಣಿ ಶುಲ್ಕ ಮತ್ತು ವಂತಿಕೆ ಹಣ ಪಡೆಯಲು, ಮಾಲೀಕರಿಂದ Contribution ಪಡೆಯಲು ವಿಧಾನಗಳನ್ನು ರೂಪಿಸಲು ಒಂದು ವಿಶೇಷ ಸಮಿತಿಯನ್ನು ರಚಿಸುವ ಅವಶ್ಯಕತೆ

ಬಗ್ಗೆ ಮಾನ್ಯ ಸದಸ್ಯ ಕಾರ್ಯದರ್ಶಿಗಳು ವಿವರಿಸಿದರು. ಸನ್ಮಾನ್ಯ ಅಧ್ಯಕ್ಷರು ಅವರ ಮಾತನ್ನು ಪುಷ್ಟೀಕರಿಸುತ್ತಾ, ವಿಶೇಷ ಸಮಿತಿ ಈ ಎಲ್ಲ ವಿಷಯಗಳನ್ನು ಕುರಿತಂತೆ ಪ್ರಾರಂಭದಲ್ಲೇ ಅಧ್ಯಯನ ನಡೆಸುವುದು ಮತ್ತು ಸಮಿತಿ ಸದಸ್ಯರಿಂದ ವಿವರವಾದ ವರದಿಯನ್ನು ಪಡೆಯುವುದು ಒಂದು ಮಹತ್ವದ ಕೆಲಸ, ಅದು ಆಗಲೇಬೇಕು ಎಂದರು.

ಸದಸ್ಯರಾದ ಶ್ರೀ ಕ್ಲಿಫ್ಟನ್ ಡಿ. ರೋಸಾರಿಯಾ ಅವರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಎಲ್ಲಾ ಕ್ಷೇತ್ರದ ಅಸಂಘಟಿತ ಕಾರ್ಮಿಕರು, ಮಾಲೀಕರು, ಸರ್ಕಾರ ಮತ್ತು ಇತರರ ರಾಜ್ಯ ಮಟ್ಟದ ಸಮಾವೇಶವೊಂದನ್ನು ಏರ್ಪಡಿಸಿ, ಎಲ್ಲರ ಅಭಿಪ್ರಾಯವನ್ನು, ಸಲಹೆ ಸೂಚನೆಗಳನ್ನು ಪಡೆಯಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸನ್ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸಿ, ಆ ರೀತಿ ರಾಜ್ಯ ಮಟ್ಟದ ಸಮಾವೇಶ ನಡೆಸುವುದು ಸೂಕ್ತವಲ್ಲ, ಏಕೆಂದರೆ ಮಂಡಳಿಯಲ್ಲಿ ಸಾಮಾಜಿಕ ಭದ್ರತೆಯನ್ನು ಎಲ್ಲ ಕ್ಷೇತ್ರದ ಅಸಂಘಟಿತ ಕಾರ್ಮಿಕರಿಗೆ ಒಮ್ಮೆಲೇ ಹಮ್ಮಿಕೊಳ್ಳಲು ಸಾಧ್ಯವಿಲ್ಲ. ಬದಲಿಗೆ ಕಾಲಕಾಲಕ್ಕೆ ಅವಶ್ಯಕತೆ ಹಾಗೂ ಬೇಡಿಕೆಗೆ ಅನುಗುಣವಾಗಿ ವಿವಿಧ ಕ್ಷೇತ್ರಗಳ ಅಸಂಘಟಿತ ಕಾರ್ಮಿಕರನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗುವುದು. ಆದರೆ ಸಮಾವೇಶವನ್ನು ಏರ್ಪಡಿಸಿದ್ದಲ್ಲಿ ಎಲ್ಲ ಕ್ಷೇತ್ರದ ಅಸಂಘಟಿತ ಕಾರ್ಮಿಕರ ಆಶೋಧ್ಯೇಯಗಳನ್ನು ಕೆಣಕುವುದರ ಜೊತೆಗೆ ಮಂಡಳಿಯ ಧ್ಯೇಯಗಳನ್ನು ಪೂರೈಸಲು ಕಷ್ಟಸಾಧ್ಯವಾಗುತ್ತದೆ ಎಂದರು. ಮಾನ್ಯ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ವಿಶೇಷ ಸಮಿತಿ ಮೊದಲು ವರದಿ ನೀಡಲಿ, ತದನಂತರ ಸಮಾವೇಶವೊಂದನ್ನು ಏರ್ಪಡಿಸಿ ಸಂಬಂಧಪಟ್ಟವರೆಲ್ಲರ ಸಲಹೆ ಪಡೆಯಬಹುದು ಎಂದರು.

ಸದಸ್ಯರಾದ ಮಾದೇಶ್ವರನ್ ಅವರು ಮಾತನಾಡಿ ತಾವು ಕರ್ನಾಟಕದ ಅಸಂಘಟಿತ ಕಾರ್ಮಿಕರ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಿ, ಕಾರ್ಮಿಕ ಇಲಾಖೆಗೆ ಈಗಾಗಲೇ ~~ಆ ಬಗ್ಗೆ~~ ವರದಿ ನೀಡಿದ್ದು, ~~ಸಲ್ಲಿಸಿರುವುದಾಗಿ ಹೇಳಿದರು.~~ ಸದರಿ ವರದಿಯನ್ನು ವಿಶೇಷ ಸಮಿತಿಯು ಪರಿಗಣಿಸಬೇಕೆಂದು ~~ಸಹ~~ ಸಲಹೆ ನೀಡಿದರು.

ವಿಶೇಷ ಸಮಿತಿಯು ಕೆಳಗೆ ಕಾಣಿಸಿರುವ ವಿಷಯಗಳನ್ನು ಕುರಿತಂತೆ ಅಧ್ಯಯನ ನಡೆಸಿ, 3 ತಿಂಗಳಲ್ಲಿ ಅಂದರೆ ಫೆಬ್ರವರಿ 2010ರ ಅಂತ್ಯಕ್ಕೆ ವರದಿ ನೀಡಬೇಕೆಂದು ಮಂಡಳಿಯ ಸದಸ್ಯರು ಅಭಿಪ್ರಾಯಪಟ್ಟರು. ಮಾನ್ಯ ಸದಸ್ಯ ಕಾರ್ಯದರ್ಶಿಗಳು ಮುಂದಿನ ಮಂಡಳಿಯ ಸಭೆಗೆ ಮುನ್ನ,

ವಿಶೇಷ ಸಮಿತಿಯ 'ಇಂಟರಿಮ್ ರಿಪೋರ್ಟ್' ಅನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿ ಕೊಡುವುದಾಗಿ ಆಶ್ವಾಸನೆ ನೀಡಿದರು. ಈ ವರದಿಯ ಆಧಾರದ ಮೇಲೆ ಮುಂದಿನ ಆಯವ್ಯಯದಲ್ಲಿ ಮಂಡಳಿಗೆ ರಾಜ್ಯ ಸರ್ಕಾರದಿಂದ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗುವುದೆಂದು ಹೇಳಿದರು.

ತದನಂತರ ವಿಶೇಷ ಸಮಿತಿಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡು ~~ಕೆಳಗಿನಂತೆ~~ ರಚಿಸಲು ತೀರ್ಮಾನಿಸಲಾಯಿತು.

<u>ಕೋಷ್ಟಕ-3</u>

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ | ಅಧ್ಯಕ್ಷರು/ಸದಸ್ಯರು |
|---|---|---|
| 1 | ಶ್ರೀ ಎಂ.ಎಸ್. ರವಿಶಂಕರ್, ಭಾ.ಆ.ಸೇ., ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. | ಅಧ್ಯಕ್ಷರು |
| 2 | ಶ್ರೀ ಎಸ್. ಮಂಜುನಾಥ ಶಾಸ್ತ್ರಿ, ಅಪರ ಕಾರ್ಮಿಕ ಆಯುಕ್ತರು (ಆಡಳಿತ), ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. | ಸದಸ್ಯರು |
| 3 | ಶ್ರೀ ವಿ.ಎನ್. ಹಿಟ್ಟಣಗಿ, ಉಪಕಾರ್ಯದರ್ಶಿ ಮತ್ತು ಉಪ ಕಾರ್ಮಿಕ ಆಯುಕ್ತರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು. | ಸದಸ್ಯರು |
| 4 | ಶ್ರೀಮತಿ ಅನುರಾಧ ಆರ್. ಸಹಾಯಕ ಕಾರ್ಯದರ್ಶಿ ಮತ್ತು ಸಹಾಯಕ ಕಾರ್ಮಿಕ ಆಯುಕ್ತರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |
| 5 | ಶ್ರೀ ವಿನ್ಸೆಂಟ್ ಕನ್ಸೆಸೋ, ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-2, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. | ಸದಸ್ಯರು |
| 6 | ಮಾಲೀಕರ ಪ್ರತಿನಿಧಿ: ಶ್ರೀ ರಮೇಶ್ ಚಂದ್ರ ಲಹೋಟಿ, ಅಧ್ಯಕ್ಷರು, ಬೆಂಗಳೂರು ಹೋಲ್‌ಸೇಲ್ ಫುಡ್‌ಗ್ರೇನ್ಸ್ ಅಂಡ್ ಪಲ್ಸಸ್ ಮಾರ್ಚೆಂಟ್ಸ್ ಅಸೋಸಿಯೇಷನ್, 1ನೇ ಮಹಡಿ, ಎಂ.ಜಿ.ಬಿ., ಎ.ಪಿ.ಎಂ.ಸಿ. ಯಾರ್ಡ್, ಯಂಶವಂತಪುರ, ಬೆಂಗಳೂರು-560022. | ಸದಸ್ಯರು |

| | | |
|---|---|---|
| 7 | ಮಾಲೀಕರ ಪ್ರತಿನಿಧಿ:<br>ಹರಿಶ್ಚಂದ್ರಮೆಂಡನ್ ಸನ್ ಆಫ್<br>ಸುಂದರಪುತ್ರನ್, ಸುಂದರರಂಗ, ಕುಳಾಯಿ<br>ಹೊಸಬೆಟ್ಟು ಅಂಚೆ, ಮಂಗಳೂರು-575026. | ಸದಸ್ಯರು |
| 8 | ಮಾಲೀಕರ ಪ್ರತಿನಿಧಿ:<br>ಶ್ರೀ ಪ್ರಸಾದ್, ಡೆವಲಪರ್ ಮತ್ತು ಬಿಲ್ಡರ್ಸ್,<br>ಪ್ರಶಾಂತ ನಿಲಯ, ಓ ಫಾರ್ಮ್,<br>ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು | ಸದಸ್ಯರು |
| 9 | ಕಾರ್ಮಿಕರ ಪ್ರತಿನಿಧಿ:<br>ಶ್ರೀ ಈಶ್ವರ್, ವಿಶ್ವಕರ್ಮ ಬಿನ್ ಶ್ರೀ<br>ನರಸಿಂಹಾಚಾರ್, ನಂ.2, ಡಾ.<br>ರಾಜ್‌ಕುಮಾರ್ ರಸ್ತೆ, ಸುಗುಣ ಆಸ್ಪತ್ರೆ<br>ಪಕ್ಕ, ಪ್ರಕಾಶನಗರ, ಬೆಂಗಳೂರು-560021. | ಸದಸ್ಯರು |
| 10 | ಕಾರ್ಮಿಕರ ಪ್ರತಿನಿಧಿ:<br>ಶ್ರೀ ಟಿ.ಜಿ. ಶ್ರೀಧರ್ ರಾವ್, ಅಧ್ಯಕ್ಷರು,<br>ಟೈಲರ್ಸ್ ಅಸೋಸಿಯೇಷನ್, ಶ್ರೀ ಶಕ್ತಿ<br>ಅಸೋಸಿಯೇಟ್ಸ್, ಶ್ರೀ ಅಂಬಾಸದನ, ಎ-<br>2ನೇ ಪ್ಯಾರಲಲ್ ರೋಡ್, ಗಾಂಧಿ ನಗರ,<br>ಶಿವಮೊಗ್ಗ-577201. | ಸದಸ್ಯರು |
| 11 | ಕಾರ್ಮಿಕರ ಪ್ರತಿನಿಧಿ:<br>ಸೌಭಾಗ್ಯ<br>ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್,<br>ಬೆಂಗಳೂರು. | ಸದಸ್ಯರು |
| 12 | ಪ್ರೋ.ಜಿ.ಕೆ. ಕಾರಂತ್, ಪ್ರೋಫೆಸರ್ ಅಂಡ್<br>ಹೆಡ್, ಸೆಂಟರ್ ಫಾರ್ ಸ್ಟಡಿ ಆಫ್<br>ಸೋಷಿಯಲ್ ಚೇಂಜ್ ಅಂಡ್<br>ಡೆವಲಪ್‌ಮೆಂಟ್, ಇನ್‌ಸ್ಟಿಟ್ಯೂಟ್ ಫಾರ್<br>ಸೋಷಿಯಲ್ ಅಂಡ್ ಎಕನಮಿಕ್ ಚೇಂಜ್,<br>ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 13 | ಪ್ರೋ.ಮಾದೇಶ್ವರನ್<br>ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್<br>ಎಕನಾಮಿಕ್ ಚೇಂಜ್, ನಾಗರಭಾವಿ,<br>ಬೆಂಗಳೂರು-560072. | ಸದಸ್ಯರು |
| 14 | ಪ್ರೋ. ನಾಗರಾಜ್<br>ರಿಜಿಸ್ಟ್ರಾರ್, ನ್ಯಾಷನಲ್ ಲಾ ಸ್ಕೂಲ್ ಆಫ್<br>ಇಂಡಿಯಾ ಯೂನಿವರ್ಸಿಟಿ,<br>ನಾಗರಭಾವಿ, ಬೆಂಗಳೂರು. | ಸದಸ್ಯರು |

ಮುಂದುವರೆದು, ವಿಶೇಷ ಸಮಿತಿಯು ಈ ಕೆಳಗೆ ನಮೂದಿಸಿರುವ ವಿಷಯಗಳನ್ನು ಕುರಿತಂತೆ ಅಧ್ಯಯನ ನಡೆಸಬೇಕೆಂದು ನಿರ್ಧರಿಸಲಾಯಿತು.

<u>ಕೋಷ್ಟಕ-4</u>

1) ಯೋಜನೆಯ ವ್ಯಾಪ್ತಿ (Scope of the Scheme)
2) ಯೋಜನೆಯ ಫಲಾನುಭವಿಗಳು (Beneficiaries of the Scheme)
3) ಯೋಜನೆಯ ಸಂಪನ್ಮೂಲ (Resources of the Scheme)
4) ಯೋಜನೆಯನ್ನು ಅನುಷ್ಠಾನಕ್ಕೆ ತರುವ ಏಜೆನ್ಸಿ (~~Agency as~~ agencies that will implement the Scheme)
5) ದೂರುಗಳ ನಿವಾರಣೆ (Redressal of grievances)
6) ಇನ್ನಿತರೆ ಪ್ರಸಕ್ತ ಪ್ರಸ್ತುತ ವಿಷಯಗಳು (Any other relevant matter)

ಶಾಸಕ ಸದಸ್ಯರಾದ ಶ್ರೀ ವಿಶ್ವನಾಥ್ ಅವರು ಮಾತನಾಡಿ ವಿಶೇಷ ಸಮಿತಿಯು ಸಂಬಂಧಪಟ್ಟ ಅಸಂಘಟಿತ ವಲಯದ stake holders ಅನ್ನು ವಿಶೇಷ ಆಹ್ವಾನಿತರನ್ನಾಗಿ ಕರೆದು, ಅವರುಗಳ ಅಭಿಪ್ರಾಯವನ್ನು ಪಡೆಯಬೇಕೆಂದು ತಿಳಿಸಿದರು.

***<u>ನಿರ್ಣಯ:-</u>*** ಮಂಡಳಿಯು ಕೋಷ್ಟಕ-3 ರಲ್ಲಿ ಇರುವ ಸದಸ್ಯರನ್ನು ಒಳಗೊಂಡ ವಿಶೇಷ ಸಮಿತಿಯನ್ನು ರಚಿಸಿ ಕೋಷ್ಟಕ-4 ರಲ್ಲಿ ನಮೂದಿಸಿರುವ ವಿಷಯಗಳನ್ನು ಕುರಿತಂತೆ ಅಧ್ಯಯನ ನಡೆಸಿ ಫೆಬ್ರವರಿ 2010 ರ ಅಂತ್ಯಕ್ಕೆ ವರದಿ ಸಲ್ಲಿಸಬೇಕೆಂದು ನಿರ್ಣಯಿಸಿತು.

**ವಿಷಯ:- 4) ಕಾರ್ಮಿಕ ಆಯುಕ್ತರನ್ನು "ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ" ಸದಸ್ಯರನ್ನಾಗಿ ನೇಮಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 101 ಎಲ್‌ಇಟಿ 2009, ದಿನಾಂಕ: 05-10-2009 ಕ್ಕೆ ತಿದ್ದುಪಡಿ ಅಧಿಸೂಚನೆ ಹೊರಡಿಸುವ ಬಗ್ಗೆ.**

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಕಲಂ 6 (1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 101 ಎಲ್‌ಇಟಿ 2009, ದಿನಾಂಕ: 05-10-2009 ಅನ್ನು ಹೊರಡಿಸಿ, 29 ಸದಸ್ಯರನ್ನು

ಒಳಗೊಂಡ **'ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ'** ಯನ್ನು ರಚಿಸಿರುತ್ತದೆ ಎಂದು ಮಾನ್ಯ ಸದಸ್ಯ ಕಾರ್ಯದರ್ಶಿಗಳು ಹೇಳಿದರು.

ಮುಂದುವರೆದು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಕಲಂ 6 (2) (ಸಿ) (V) ರ ಅನ್ವಯ ಸದರಿ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರದ ಇಲಾಖೆಗಳ 7 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿರುತ್ತದೆ ಎಂದು ತಿಳಿಸಿ ಅದರ ವಿವರ ನೀಡಿದರು.

**ಕೋಷ್ಟಕ-5**

| ಕ್ರಮ ಸಂಖ್ಯೆ | ಸದಸ್ಯರು |
|---|---|
| 1 | ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ. |
| 2 | ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. |
| 3 | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕಾ ಇಲಾಖೆ. |
| 4 | ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ. |
| 5 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. |
| 6 | ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ. |
| 7 | ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ. |

ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಇವರು ಅವಶ್ಯಕವಾಗಿ ಮಂಡಳಿಯ ಸದಸ್ಯರಾಗಬೇಕಾಗಿತ್ತು. ಆದರೆ ಸರ್ಕಾರದ 29 ಸದಸ್ಯರ ಅಧಿಸೂಚನೆಯಲ್ಲಿ ಇವರನ್ನು ಸದಸ್ಯರೆಂದು ನೇಮಕ ಮಾಡಲಾಗಿರುವುದಿಲ್ಲ. ಆದಕಾರಣ ಮೇಲೆ ಕಾಣಿಸಿರುವ ಸರ್ಕಾರದ ಇಲಾಖೆಗಳ 7 ಸದಸ್ಯರ ಪೈಕಿ ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಬದಲಿಗೆ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಇವರನ್ನು ಸದಸ್ಯರೆಂದು ನೇಮಕ ಮಾಡಿ, ಸರ್ಕಾರದ ಅಧಿಸೂಚನೆ ದಿನಾಂಕ: 05-10-2009 ಕ್ಕೆ ತಿದ್ದುಪಡಿ ಹೊರಡಿಸಬೇಕಾಗಿರುತ್ತದೆ ಎಂದು ಸನ್ಮಾನ್ಯ ಅಧ್ಯಕ್ಷರು ಮಂಡಳಿಗೆ ತಿಳಿಸಿದರು. ಸದರಿ ವಿಷಯವನ್ನು ಸದಸ್ಯರು ಸರ್ವಾನುಮತದಿಂದ ಒಪ್ಪಿದರು.

*ನಿರ್ಣಯ:–* ಮಂಡಳಿಯ ರಚನೆಗೆ ಸಂಬಂಧಪಟ್ಟಂತೆ ಹೊರಡಿಸಲಾಗಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 101 ಎಲ್‌ಇಟಿ 2009, ದಿನಾಂಕ: 05–10–2009 ರಲ್ಲಿ ಸರ್ಕಾರದ ಪ್ರತಿನಿಧಿಗಳ ಪೈಕಿ 'ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ' ಇವರ ಬದಲಿಗೆ 'ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ' ಇವರನ್ನು "ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ" ಸದಸ್ಯರನ್ನಾಗಿ ನೇಮಿಸಿ, ತಿದ್ದುಪಡಿ ಅಧಿಸೂಚನೆ ಹೊರಡಿಸಲು ನಿರ್ಣಯಿಸಲಾಯಿತು.

**ವಿಷಯ 5:– ಅಸಂಘಟಿತ ಕಾರ್ಮಿಕರ ಐದು ವಲಯಗಳ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಐದು ನಿಧಿಗಳನ್ನು ಸ್ಥಾಪಿಸುವ ಬಗ್ಗೆ.**

~~ಮಾನ್ಯ~~ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಕಲಂ 3(1) ರ ಅನ್ವಯ ಕೇಂದ್ರ ಸರ್ಕಾರವು ~~ಕೆಳಕಂಡ~~ ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ಹಮ್ಮಿಕೊಂಡು ಆಗಿಂದಾಗ್ಗೆ ಅಧಿಸೂಚನೆ ಹೊರಡಿಸುತ್ತದೆ ಎಂದು ತಿಳಿಸಿ ಅದರ ವಿವರ ನೀಡಿದರು.

**<u>ಕೋಷ್ಟಕ–6</u>**

1) Life and disability cover
2) Health and maternity benefits
3) Old age protection
4) Any other benefit as may be determined by the central government.

ಮುಂದುವರೆದು, ~~ಅವರು~~, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಕಲಂ 3(4) ರ ಅನ್ವಯ ರಾಜ್ಯ ಸರ್ಕಾರವು ಕೆಳಕಂಡ ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿ ಅದರ ವಿವರ ನೀಡಿದರು.

**<u>ಕೋಷ್ಟಕ–7</u>**

1) P.F.
2) Employment injury benefit

3) Housing

4) Education

5) Skill up gradation of workers

6) Funeral assistance ಮತ್ತು

7) Old age homes

ಸನ್ಮಾನ್ಯ ಅಧ್ಯಕ್ಷರು ಮಾತನಾಡಿ, ಅಸಂಘಟಿತ ಕಾರ್ಮಿಕರ ವಲಯ ಬಹುವ್ಯಾಪಿಯಾಗಿದ್ದು, ಈಗ ಸಧ್ಯಕ್ಕೆ ಕರ್ನಾಟಕ ರಾಜ್ಯದ ಐದು ವಲಯಗಳ (sectors) ಅಸಂಘಟಿತ ಕಾರ್ಮಿಕರನ್ನು ಮಾತ್ರ ಮೇಲೆ ಕಾಣಿಸಿರುವ ಯೋಜನೆಗಳಿಗೆ ಒಳಪಡಿಸಬೇಕೆಂದು ಆಶಿಸಲಾಗಿದೆ.

ಈ ವಲಯಗಳೆಂದರೆ:-

1) ದರ್ಜಿ

2) ದೋಬಿ

3) ಹಮಾಲಿ

4) ಹೋಟೆಲ್

5) ಆಟೋ ಮತ್ತು ಟ್ಯಾಕ್ಸಿ ಡ್ರೈವರ್ಸ್ ಎಂದರು.

ಜೊತೆಗೆ ಭಾರತ ಸರ್ಕಾರವು 2001 ರಲ್ಲಿ ನಡೆಸಿರುವ ಸಮೀಕ್ಷೆಯ ಪ್ರಕಾರ ಮೇಲ್ಕಾಣಿಸಿರುವ ವಲಯಗಳ ಅಂಕಿಅಂಶಗಳು ಈ ಕೆಳಗಿನಂತೆ ಇದೆ ಎಂದರು.

**ಕೋಷ್ಟಕ-8**

| Sl.No. | Sectors | No. of Workers |
|---|---|---|
| 1 | Tailors and Dress Makers | 3,19,623 |
| 2 | Hand Launderers and Pressers | 33,861 |
| 3 | Transport Labourers (Hamals) | 1,04,074 |
| 4 | House Keeping and Restaurant Services Workers | 2,02,372 |
| 5 | Car, Taxi and Van Drivers | 1,06,790 |

ತದನಂತರ ಈ ವಿಷಯವನ್ನು ಕುರಿತಂತೆ ಸದಸ್ಯರುಗಳ ಅಭಿಪ್ರಾಯವನ್ನು ಕೇಳಲಾಯಿತು. ಸದಸ್ಯರಾದ ಶ್ರೀಮತಿ ಶಶಿಕಲಾ ಅವರು, ಮಾತನಾಡಿ ಮನೆಗೆಲಸದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಆ ವಲಯದವರನ್ನು ಸಹ ಯೋಜನೆಯ ವ್ಯಾಪ್ತಿಗೆ ಒಳಪಡಿಸಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಅಧ್ಯಕ್ಷರು ಈಗ ಸದ್ಯಕ್ಕೆ ಐದು ವಲಯಗಳ ಅಸಂಘಟಿತ ಕಾರ್ಮಿಕರನ್ನು ಸಾಮಾಜಿಕ ಭದ್ರತಾ ಯೋಜನೆಗೆ ಗುರಿಪಡಿಸಬೇಕೆಂದು ಆಶಿಸಿದೆ. ಆದರೆ ಇದರರ್ಥ ಇತರೆ ವಲಯಗಳ ಅಸಂಘಟಿತ ಕಾರ್ಮಿಕರನ್ನು ಕಡೆಗಾಣಿಸಿದೆ ಎಂದಲ್ಲ, ಕಾಲ ಕ್ರಮೇಣ ಮನೆಗೆಲಸದ ಅಸಂಘಟಿತ ಕಾರ್ಮಿಕರನ್ನು ಸಹ ಮಂಡಳಿಯ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗುವುದು ಎಂದರು. ಮಾನ್ಯ ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರ ಮಾತನ್ನು ಪುಷ್ಟೀಕರಿಸುತ್ತಾ, ಸದ್ಯಕ್ಕೆ ಸುಲಭವಾಗಿ ಗುರುತಿಸಬಲ್ಲ ವಲಯದ ಅಸಂಘಟಿತ ಕಾರ್ಮಿಕರನ್ನು ಆಯ್ಕೆ ಮಾಡಲಾಗಿದೆ. ಮುಂದೆ ಆಗಿಂದಾಗ್ಗೆ ಬೇರೆಬೇರೆ ಕ್ಷೇತ್ರದ ಅಸಂಘಟಿತ ಕಾರ್ಮಿಕರನ್ನು ಸಹ ಮಂಡಳಿಯ ಯೋಜನೆಗಳ ವ್ಯಾಪ್ತಿಗೆ ಒಳಪಡಿಸಲಾಗುವುದು. ಯಾರೂ ಈ ಬಗ್ಗೆ ಧೃತಿಗೆಡುವ ಅವಶ್ಯಕತೆ ಇಲ್ಲ ಎಂದರು.

ಈ ಐದು ವಲಯಗಳ ಮಾಲೀಕರಿಂದ ಯಾವ ರೀತಿಯಲ್ಲಿ ಸೆಸ್ ಅಥವಾ Contribution ಅನ್ನು ಪಡೆಯಬೇಕು ಎನ್ನುವ ಬಗ್ಗೆಯೂ ರೂಪುರೇಷೆಗಳನ್ನು ನಿರ್ಧರಿಸಬೇಕಾಗುತ್ತದೆ, ಉದಾಹರಣೆಗೆ ಎ.ಪಿ.ಎಂ.ಸಿ. ಈಗಾಗಲೇ ಸಂಗ್ರಹಿಸುತ್ತಿರುವ ಸೆಸ್ ಮಂಡಳಿಗೆ ಬರುವಂತೆ ವ್ಯವಸ್ಥೆ ಆಗಬೇಕಾಗುತ್ತದೆ. ಹಾಗೆಯೇ ಹೋಟೆಲ್ ಮಾಲೀಕರಿಂದ ಸೆಸ್ ಸಂಗ್ರಹಣೆ ಮತ್ತು ಆಟೋ ಮತ್ತು ಟ್ಯಾಕ್ಸಿಗಳನ್ನು ಖರೀದಿಸುವ ಮಾಲೀಕರಿಂದ ಸೆಸ್ ಸಂಗ್ರಹಣೆ ಮಾಡಬೇಕಾಗುತ್ತದೆ. ಈ ಬಗ್ಗೆಯು ಸಹ ವಿಶೇಷ ಸಮಿತಿ ಕೂಲಂಕುಷ ಅಧ್ಯಯನ ನಡೆಸಬೇಕು ಎಂದು ಸದಸ್ಯರುಗಳು ಅಭಿಪ್ರಾಯಪಟ್ಟರು.

***<u>ನಿರ್ಣಯ:-</u>*** 1) ದರ್ಜಿ, 2) ದೋಬಿ, 3) ಹಮಾಲಿ, 4) ಹೋಟೆಲ್ ಮತ್ತು 5) ಆಟೋ ಮತ್ತು ಟ್ಯಾಕ್ಸಿ ಡ್ರೈವರ್ಸ್ – ಈ ಐದು ವಲಯಗಳ ಅಸಂಘಟಿತ ಕಾರ್ಮಿಕರಿಗೆ ಕೋಷ್ಠಕ–6 ಮತ್ತು 7 ರಲ್ಲಿ ನಮೂದಿಸಿರುವ ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಲು ಸಭೆ ಸರ್ವಾನುಮತದಿಂದ ನಿರ್ಧರಿಸಿತು. ಈ ಬಗ್ಗೆ ವಿಶೇಷ ಸಮಿತಿಯ ವರದಿಯನ್ನು ಆಧರಿಸಿ, ವಿಸ್ತೃತ ಯೋಜನೆ ತಯಾರಿಸಬಹುದೆಂದು ನಿರ್ಧರಿಸಲಾಯಿತು.

**ಇತರೆ ವಿಷಯ:-** ಸನ್ಮಾನ್ಯ ಅಧ್ಯಕ್ಷರು ಅಧಿಕಾರೇತರ ಸದಸ್ಯರುಗಳಿಗೆ ರೂ.1,000 ಗಳ Sitting Fees ಅನ್ನು ಮತ್ತು ಬೆಂಗಳೂರನ್ನು ಹೊರತು ಪಡಿಸಿ ಬೇರೆ ಸ್ಥಳಗಳಿಂದ ಬರುವಂತಹ ಅಧಿಕಾರೇತರ ಸದಸ್ಯರುಗಳಿಗೆ ಟಿ.ಎ. ಮತ್ತು ಡಿ.ಎ.ಗಳನ್ನು ನೀಡುವ ಬಗ್ಗೆ ಪ್ರಸ್ತಾವನೆ ನೀಡಿದರು.

***ನಿರ್ಣಯ:-*** ಅಧಿಕಾರೇತರ ಸದಸ್ಯರುಗಳಿಗೆ ರೂ.1,000 ಗಳ Sitting Fees ಅನ್ನು ಮತ್ತು ಬೆಂಗಳೂರನ್ನು ಹೊರತು ಪಡಿಸಿ ಬೇರೆ ಸ್ಥಳಗಳಿಂದ ಬರುವಂತಹ ಅಧಿಕಾರೇತರ ಸದಸ್ಯರುಗಳಿಗೆ ಟಿ.ಎ. ಮತ್ತು ಡಿ.ಎ.ಗಳನ್ನು ನೀಡಲು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

(ಶ್ರೀ ಬಿ. ಎನ್. ಬಚ್ಚೇಗೌಡ)
ಕಾರ್ಮಿಕ ಸಚಿವರು,
ಮತ್ತು ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

(ಶ್ರೀ ರಮೇಶ್ ಬಿ. ಝುಳಕಿ)
ಸರ್ಕಾರದ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ, ಬೆಂಗಳೂರು.
ಮತ್ತು ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

## ಅನುಬಂಧ

**ಹಾಜರಿದ್ದ ಸದಸ್ಯರು:**

1. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ಸದಸ್ಯ ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಪರವಾಗಿ ಅವರ ಕಛೇರಿಯಿಂದ ಪ್ರತಿನಿಧಿ ಹಾಜರಿದ್ದರು.
3. ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರ ಪರವಾಗಿ ಜಂಟಿ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರು ಹಾಜರಿದ್ದರು.
4. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪರವಾಗಿ ಅವರ ಕಛೇರಿಯಿಂದ ಪ್ರತಿನಿಧಿ ಹಾಜರಿದ್ದರು.
5. ಶ್ರೀ ಎಸ್.ಆರ್. ವಿಶ್ವನಾಥ, ಶಾಸಕರು, ಯಲಹಂಕ ಕ್ಷೇತ್ರ, ನಂ.14, ಸಿಂಗ ನಾಯಕನಹಳ್ಳಿ ಪೋಸ್ಟ್, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು-5600064.
6. ಶ್ರೀ ವಾಲ್ಮೀಕಿ ನಾಯಕ, ಶಾಸಕರು, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ.
7. ಶ್ರೀ ಈಶ್ವರ್, ವಿಶ್ವಕರ್ಮ ಬಿನ್ ಶ್ರೀ ನರಸಿಂಹಾಚಾರ್, ನಂ.2, ಡಾ. ರಾಜ್‌ಕುಮಾರ್ ರಸ್ತೆ, ಸುಗುಣ ಆಸ್ಪತ್ರೆ ಪಕ್ಕ, ಪ್ರಕಾಶನಗರ, ಬೆಂಗಳೂರು-560021.
8. ಶ್ರೀಮತಿ ಶಶಿಕಲಾ, ಗೃಹಕೃತ್ಯ ಕಾರ್ಮಿಕರು, ನಂ.112/4, ಇನ್‌ಫೆಂಟ್ರಿರಸ್ತೆ, ಶಿವಾಜಿನಗರ, ಬೆಂಗಳೂರು-560001.
9. ಶ್ರೀಮತಿ ಯಮುನಾ, ಗಾರ್ಮೆಂಟ್ಸ್ ಕಾರ್ಮಿಕರು, ಕೇರಾಫ್ ಕುಮಾರ್, ನಂ.82/86, ಲಕ್ಷ್ಮೀ ಮುನೇಶ್ವರ ಫ್ಲೋರ್ ಮಿಲ್, ಆಪೋಸಿಟ್
10. ಶ್ರೀ ಟಿ.ಜಿ. ಶ್ರೀಧರ್ ರಾವ್, ಅಧ್ಯಕ್ಷರು, ಟೈಲರ್ಸ್ ಅಸೋಸಿಯೇಷನ್, ಶ್ರೀ ಶಕ್ತಿ ಅಸೋಸಿಯೇಟ್ಸ್, ಶ್ರೀ ಅಂಬಾಸದನ, ಎ-2ನೇ ಪ್ಯಾರಲಲ್ ರೋಡ್, ಗಾಂಧಿ ನಗರ, ಶಿವಮೊಗ್ಗ-577201.
11. ಶ್ರೀ ರಮೇಶ್ ಚಂದ್ರ ಲಹೋಟಿ, ಅಧ್ಯಕ್ಷರು, ಬೆಂಗಳೂರು ಹೋಲ್‌ಸೇಲ್ ಫುಡ್‌ಗ್ರೇನ್ಸ್ ಅಂಡ್ ಪಲ್ಸಸ್ ಮಾರ್ಚೆಂಟ್ಸ್ ಅಸೋಸಿಯೇಷನ್, 1ನೇ ಮಹಡಿ, ಎಂ.ಜಿ.ಬಿ., ಎ.ಪಿ.ಎಂ.ಸಿ. ಯಾರ್ಡ್, ಯಂಶವಂತಪುರ, ಬೆಂಗಳೂರು-560022.
12. ಹರಿಶ್ಚಂದ್ರ ಮೆಂಡನ್ ಸನ್ ಆಫ್ ಸುಂದರಪುತ್ರನ್, ಸುಂದರರಂಗ, ಕುಳಾಯಿ ಹೊಸಬೆಟ್ಟು ಅಂಚೆ, ಮಂಗಳೂರು-575026.
13. ಕೆ. ಕುಮಾರೇಸನ್, ಅಧ್ಯಕ್ಷರು, ಎ.ಪಿ.ಎಂ.ಸಿ.ಯಾರ್ಡ್, ಎಂ.ಜಿ.ಕಾಂಪ್ಲೆಕ್ಸ್, ಯಶವಂತಪುರ, ಬೆಂಗಳೂರು-22.
14. ಶ್ರೀ ನಜೀಬುಲ್ಲಾ ಖಾನ್ ಬಿನ್ ರಸೂಲ್ ಖಾನ್, C/o ಕಾರ್ಪೋರೇಷನ್ ಬ್ಯಾಂಕ್, 1ನೇ ಮಹಡಿ, ಗಂಗಮ್ಮ ಗುಡಿ ರಸ್ತೆ, ಎಂ.ವಿ.ಎಕ್ಸ್‌ಟೆನ್‌ಷನ್, ಹೊಸಕೋಟೆ-562114.
15. ಶ್ರೀ ವೆಂಕಟೇಶ್, ರಾಂಪುರ, ಬಿದರಹಳ್ಳಿ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.

16. ಪ್ರೊ.ಜಿ.ಕೆ. ಕಾರಂತ್, ಪ್ರೊಫೆಸರ್ ಅಂಡ್ ಹೆಡ್, ಸೆಂಟರ್ ಫಾರ್ ಸ್ಟಡಿ ಆಫ್ ಸೋಷಿಯಲ್ ಚೇಂಜ್ ಅಂಡ್ ಡೆವಲಪ್‌ಮೆಂಟ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು-560072.
17. ಪ್ರೊ. ಎಸ್.ಮಾದೇಶ್ವರನ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು-560072.
18. ಶ್ರೀ ಕ್ಲಿಫ್ಟನ್ ಡಿ. ರೋಸಾರಿಯಾ, ಸದಸ್ಯ, ಆಲ್ಟರ್‌ನೇಟಿವ್ ಲಾ ಫೋರಮ್ (ಎಎಲ್‌ಎಫ್), ನಂ.122/4, ಇನ್‌ಫೆಂಟ್ರಿ ರಸ್ತೆ, ಇನ್‌ಫೆಂಟ್ರಿ ವೆಡ್ಡಿಂಗ್ ಹಾಲ್ ಎದುರು, ಬೆಂಗಳೂರು-1.
19. ವಿಶೇಷ ಆಹ್ವಾನಿತರು:- ಶ್ರೀ ಎಸ್. ಮಂಜುನಾಥ ಶಾಸ್ತ್ರಿ, ಅಪರ ಕಾರ್ಮಿಕ ಆಯುಕ್ತರು (ಆಡಳಿತ), ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.

**ಇವರಿಗೆ Leave of Absence ನೀಡಲಾಯಿತು.**

1. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕಾ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.
4. ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
5. ಶ್ರೀ ಎಂ. ನಟೇಶ್, ಬಿನ್ ಮುನಿಸ್ವಾಮಿಗೌಡ, ಎಂ.ಪಿ., ಕೃಷಿ ಕಾರ್ಮಿಕರು, ಮೇಡಹಳ್ಳಿ, ಅನುಗೊಂಡನಹಳ್ಳಿ, ಹೋಬಳಿ-560067, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
6. ಶ್ರೀ ಹೆಚ್. ಆರ್. ಶಂಕರ್ ಬಿನ್ ರಾಮದಾಸ್, ಮೀನುಗಾರರು, ಎ.ಆರ್. ಎಕ್ಸ್‌ಟೆನ್‌ಷನ್, ಹೊಸಕೋಟೆ ಟೌನ್-562114.
7. ಅಧ್ಯಕ್ಷರು, ಮಂಡಿ ಹಮಾಲಿ ಸಂಘ, ಎ.ಪಿ.ಎಂ.ಸಿ.ಯಾರ್ಡ್, 6ನೇ ಮುಖ್ಯರಸ್ತೆ, ಸಮುದಾಯ ಭವನ, ಯಶವಂತಪುರ, ಬೆಂಗಳೂರು-22.
8. ಶ್ರೀ ಪ್ರಸಾದ್, ಡೆವಲಪರ್ ಮತ್ತು ಬಿಲ್ಡರ್ಸ್, ಪ್ರಶಾಂತ ನಿಲಯ, ಓ ಫಾರ್ಮ್, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು
9. ಅಧ್ಯಕ್ಷರು, ಬಳ್ಳಾರಿ ಗಾರ್ಮೆಂಟ್ಸ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ (ಬಿಜಿಎಂಎಸ್) ಹೀ-ಮ್ಯಾನ್ ಗಾರ್ಮೆಂಟ್ಸ್, ಮಾರುತಿ ಕಾಲೋನಿ, ಕಾರ್‌ಸ್ಟ್ರೀಟ್, ಬಳ್ಳಾರಿ-583101.
10. ಪ್ರೊ. ಅಲೋಕ್ ಶರ್ಮ, ನಿರ್ದೇಶಕರು, ಇನ್‌ಸ್ಟಿಟ್ಯೂಟ್ ಫಾರ್ ಯೂಮನ್ ಡೆವಲಪ್‌ಮೆಂಟ್, ಐಐಪಿಎ ಕ್ಯಾಂಪಸ್, ಐ.ಟಿ.ಓ., ನವದೆಹಲಿ.
11. ಶ್ರೀಮತಿ ಗೀತಾ ಮೆನನ್, ಸ್ತ್ರೀ ಜಾಗೃತಿ ಸಮಿತಿ, ಗೃಹ ಕಾರ್ಮಿಕರ ಹಕ್ಕಿನ ಒಕ್ಕೂಟ, ನಂ.1863, ಸೌತ ಎಂಡ್ 'ಸಿ' ಕ್ರಾಸ್, ಎಬೋ ಕ್ರಿಶ್ ಟೆಕ್ನಾಲಜೀಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-78.